ಸಂ:173/ಸಿಬ್ಬಂದಿ-/ಸಿಪಿಸಿ/ನೇಮಕಾತಿ/ತಾ.ಆ/ಯಾಜಿ/2020

ಪೊಲೀಸ್ ಅಧೀಕ್ಷಕರವರ ಕಛೇರಿ
ಯಾದಗಿರಿ, ದಿನಾಂಕ:18.05.2020.

**ಪೋಲ್‌ಸೆಟ್-2019 ರ ಪ್ರಥಮ ತಾತ್ಕಾಲಿಕ ಆಯ್ಕೆ ಪಟ್ಟಿ**

ವಿಷಯ:- ಪೊಲೀಸ್ ಕಾನ್ಸ್‌ಟೇಬಲ್ (ಸಿವಿಲ್) (ಹೈ-ಕ) (ಪುರುಷ & ಮಹಿಳಾ)-163 ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಪ್ರಥಮ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸುವ ಬಗ್ಗೆ.

ಉಲ್ಲೇಖ:-1. ಅಧಿಸೂಚನೆ ಸಂಖ್ಯೆ:05/ನೇಮಕಾತಿ-4/2019-20, ದಿನಾಂಕ:06.06.2019
2. ಎ.ಡಿ.ಜಿ.ಪಿ ನೇಮಕಾತಿ ಬೆಂಗಳೂರು ರವರ ಜ್ಞಾಪನ ಸಂ:05/ನೇಮಕಾತಿ-4/2019-20, ದಿನಾಂಕ:06.05.2020

***

ಮೇಲ್ಕಾಣಿಸಿದ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಯಾದಗಿರಿ ಜಿಲ್ಲೆಯಲ್ಲಿ ಸ್ಥಳೀಯ ವೃಂದದಲ್ಲಿ ಖಾಲಿ ಇದ್ದ 04 ಮಹಿಳಾ ಪೊಲೀಸ್‌ಕಾನ್ಸ್‌ಟೇಬಲ್ ರವರುಗಳ (ಸಿವಿಲ್) (ಹೈ-ಕ) ಹುದ್ದೆಗಳಿಗೆ ಉಲ್ಲೇಖಿತ (1)ರ ಪ್ರಕಾರ ಅಧಿಸೂಚನೆಯನ್ನು ಹೊರಡಿಸಲಾಗಿತ್ತು. ಸದರಿ ಅಧಿಸೂಚನೆಯನ್ವಯ ಅರ್ಜಿ ಸಲ್ಲಿಸಿದ ಅರ್ಹ ಅಭ್ಯರ್ಥಿಗಳಿಗೆ ದಿನಾಂಕ:22.09.2019 ರಂದು ಯಾದಗಿರಿ ನಗರದಲ್ಲಿ ಲಿಖಿತ ಪರೀಕ್ಷೆಯನ್ನು ನಡೆಸಲಾಗಿರುತ್ತದೆ. ಲಿಖಿತ ಪರೀಕ್ಷೆಯಲ್ಲಿ 1:5 ರ ಅನುಪಾತದಲ್ಲಿ ಅರ್ಹರಾದ ಅಭ್ಯರ್ಥಿಗಳಿಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಪಿಎಸ್‌ಟಿ/ಇಟಿ ಪರೀಕ್ಷೆಯನ್ನು ದಿನಾಂಕ:26.02.2020 ರಂದು ಯಾದಗಿರಿ ನಗರದಲ್ಲಿ ನಡೆಸಲಾಗಿರುತ್ತದೆ.

ಪಿಎಸ್‌ಟಿ ಮತ್ತು ಇಟಿ ಪರೀಕ್ಷೆಗಳಲ್ಲಿ ಅರ್ಹರಾದ ಅಭ್ಯರ್ಥಿಗಳಲ್ಲಿ ನೇರ ಮತ್ತು ಸಮತಲ ವರ್ಗಿಕರಣ ಮತ್ತು ನಿಯಮಗಳನ್ವಯ 1:1 ರ ಅನುಪಾತದಲ್ಲಿ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ತಯಾರಿಸಿ ಉಲ್ಲೇಖ(2)ರ ರೀತ್ಯಾ ಈ ಕಛೇರಿಗೆ ಕಳುಹಿಸಿ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಿ ಮುಂದಿನ ಪ್ರಕ್ರೀಯೆಯನ್ನು ಕೈಗೊಳ್ಳಲು ತಿಳಿಸಿರುತ್ತಾರೆ. ಅದರಂತೆ ಪೊಲೀಸ್ ಕಾನ್ಸ್‌ಟೇಬಲ್ (ಸಿವಿಲ್) (ಹೈ-ಕ) (ಪುರುಷ & ಮಹಿಳಾ)-163 ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಪ್ರಥಮ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಪ್ರಕಟಿಸಲಾಗಿದೆ.

1. ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿನ ಅಭ್ಯರ್ಥಿಗಳು ನೇಮಕಾತಿಗೆ ಯಾವುದೇ ಹಕ್ಕು ಹೊಂದಿರುವುದಿಲ್ಲ.
2. ಈ ಆಯ್ಕೆ ಪಟ್ಟಿಯು ವೈದ್ಯಕೀಯ ಮಂಡಳಿಯು ನಡೆಸುವ ವೈದ್ಯಕೀಯ ಪರೀಕ್ಷೆಯ ಮತ್ತು ಮೂಲ ದಾಖಲಾತಿಗಳ ಪರಿಶೀಲನಾ ಫಲಿತಾಂಶಗಳಿಗೆ ಒಳಪಟ್ಟಿರುತ್ತದೆ.
3. ವೈದ್ಯಕೀಯ ಮಂಡಳಿ ಮುಖಾಂತರ ನಡೆಸಲಾಗುವ ವೈದ್ಯಕೀಯ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಅನರ್ಹರಾದಲ್ಲಿ, ಅನರ್ಹರಾದ ಅಭ್ಯರ್ಥಿಗಳನ್ನು ಮುಂದಿನ ಹಂತಕ್ಕೆ ಪರಿಗಣಿಸಲಾಗುವುದಿಲ್ಲ.

4. ದಾಖಲಾತಿ ಪರಿಶೀಲನೆ ಸಂದರ್ಭದಲ್ಲಿ ದಾಖಲಾತಿಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ ಪರಶೀಲನೆಗೆ ಒಳಪಡಿಸಿ ನೈಜತೆಯ ಬಗ್ಗೆ ಧೃಡಪಡಿಸಕೊಳ್ಳಲಾಗುವುದು. ದಾಖಲಾತಿಗಳು ನೈಜತೆಯಿಂದ ಕೂಡಿರದೇ ಇದ್ದಲ್ಲಿ ಅಂತಹ ಅಭ್ಯರ್ಥಿಗಳನ್ನು ಮುಂದಿನ ಹಂತಕ್ಕೆ ಪರಿಗಣಿಸುವುದಿಲ್ಲ ಮತ್ತು ಅಂತಹವರ ವಿರುದ್ಧ ಕಾನೂನಾತ್ಮಕ ಕ್ರಮಗಳನ್ನು ಜರುಗಿಸಲಾಗುವುದು.
5. ಅಭ್ಯರ್ಥಿಗಳ ಗುಣ, ನಡತೆ ಮತ್ತು ಚಾರಿತ್ರ್ಯ ಕುರಿತು ಮತ್ತು ಬೆರಳಚ್ಚುಗಳನ್ನು ಪೊಲೀಸ್ ಪರಿಶೀಲನೆಗೆ ಒಳಪಡಿಸಲಾಗುವುದು. ಪೊಲೀಸ್ ಪರಿಶೀಲನೆ ವರದಿಯಲ್ಲಿ ಅಭ್ಯರ್ಥಿಗಳ ವಿರುದ್ಧ ಕ್ರಿಮಿನಲ್/ಸಿವಿಲ್ ಪ್ರಕರಣಗಳು ಇರುವುದು ಕಂಡು ಬಂದಲ್ಲಿ ಅಂತಹ ಅಭ್ಯರ್ಥಿಗಳನ್ನು ನೇಮಕಾತಿಗೆ ಪರಿಗಣಿಸಲಾಗುವುದಿಲ್ಲ.
6. ಯಾವುದೇ ವೇಳೆ ಈ ಆಯ್ಕೆ ಪಟ್ಟಿಯು ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿ/ ಮಾನ್ಯ ನ್ಯಾಯಾಲಯಗಳ ಆದೇಶಗಳಿಗೆ ಒಳಪಟ್ಟಿರುತ್ತದೆ.

**CPC HK-2019 (WOMEN) YADAGIRI PROVISIONAL LIST**

| Sl No | Application No | RollNo | Name | Applied As Name | Category Name | DoB | Written Marks | Selection Category |
|---|---|---|---|---|---|---|---|---|
| 1 | 1420378 | 3400246 | JYOTI | Direct Candidate | 2A | 12-07-1997 | 48.75 | GM_OTH |
| 2 | 1420194 | 3401720 | SHAMINABANU | Direct Candidate | 2B | 25-07-1993 | 48 | GM_RUR |
| 3 | 1420152 | 3401387 | GAYATRI | Direct Candidate | SC | 01-06-1995 | 46.5 | SC_RUR |
| 4 | 1420199 | 3403383 | KAVYA | Direct Candidate | 2A | 08-02-1997 | 46.25 | 2A_OTH |

18/5/2020

ಶ್ರೀ ಋಷಿಕೇಶ್ ಭಗವಾನ್ ಸೋನವಣೆ, ಐ.ಪಿ.ಎಸ್
ಅಧ್ಯಕ್ಷರು ನೇಮಕಾತಿ ಸಮಿತಿ ಮತ್ತು
ಪೊಲೀಸ್ ಅಧೀಕ್ಷಕರು
ಯಾದಗಿರಿ

ಶ್ರೀ ಬಸವರಾಜ ಜಿಳ್ಳೆ
ಸದಸ್ಯರು, ನೇಮಕಾತಿ ಸಮಿತಿ ಮತ್ತು
ಕಮಾಂಡೆಂಟ್ 6ನೇ ಪಡೆ
ಕೆಎಸ್ಆರ್‌ಪಿ ಕಲಬುರಗಿ ಜಿಲ್ಲೆ

ಶ್ರೀ ವೆಂಕಟೇಶ 18/05/2020
ಸದಸ್ಯರು, ನೇಮಕಾತಿ ಸಮಿತಿ ಮತ್ತು
ಪೊಲೀಸ್ ಉಪ-ಅಧೀಕ್ಷಕರು
ಶೋರಾಪೂರ ಉಪ-ವಿಭಾಗ, ಯಾದಗಿರಿ ಜಿಲ್ಲೆ

ಸದ್ಯಸರು, ನೇಮಕಾತಿ ಸಮಿತಿ ಮತು ಜಿಲ್ಲಾ
ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು
ಯಾದಗಿರಿ ಜಿಲ್ಲೆ.

ಸದ್ಯಸರು, ನೇಮಕಾತಿ ಸಮಿತಿ ಮತು ಜಿಲ್ಲಾ
ಅಲ್ಪಸಂಖ್ಯಾತರ ಕಲ್ಯಾಣಾಧಿಕಾರಿಗಳು
ಯಾದಗಿರಿ ಜಿಲ್ಲೆ.

ಸದ್ಯಸರು, ನೇಮಕಾತಿ ಸಮಿತಿ ಮತ್ತು
ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು
ಯಾದಗಿರಿ ಜಿಲ್ಲೆ